ಪದಬಂಧ



### ಎಡದಿಂದ ಬಲಕ್ಕೆ

1. ಆನೆಯ ಜೀವನ ಕ್ರಮ ಕುರಿತ ವಿಸ್ತೃತ ವ್ಯಾಸಂಗ 4
3. ವ್ಯಾಪಕ ಪರಿಣಾಮ ಬೀರಿದೆ ನೋಡಿ ಪ್ರಕೃತಿಯ ಮುನಿಸು 3
4. ವಾರ್ತಾ ವಾಚಕನಾಗಲು ಬಂದಿದ್ದಾನೆ ನೋಡಿ ವ್ಯಾಪಾರಿ 3
6. ಆ ಸುಂದರ ಕನ್ಯೆಗೆ ಸೂಕ್ತ ವರ ಸಿಕ್ಕಿದಂತೆ ಕನಸು 4
7. ಎಲ್ಲವನ್ನೂ ತಹಬಂದಿಯಲ್ಲಿಡುವ ಯೋಜನೆಗೆ ಭದ್ರ ಬುನಾದಿ 4
9. ಅಕ್ಷಯವೇನಲ್ಲ ಈ ದೇವತಾ ಪ್ರಪಂಚ ಕೂಡ 4
12. ನಾಳೆಗೆಂದು ಕದ್ದು ಕದ್ದು ಸಂಗ್ರಹಿಸಿದ್ದು ಕಪ್ಪು ಹಣ ಆಯಿತು 4
14. ಕಂಚಿನ ವಸ್ತುಗಳನ್ನು ಮಾರುವ ಆತ ಭಾರೀ ಮೋಸಗಾರ 3
15. ಕೊಳಕುತನವೇ ಅವನಲ್ಲಿರುವ ದೊಡ್ಡ ದೋಷ 3
16. ತಗ್ಗು ಇರುವಲ್ಲೆಲ್ಲ ಸಂಗ್ರಹವಾಗಿದೆ ನೋಡಿ ಒಣಗಿದ ಪರ್ಣ 4

### ಮೇಲಿನಿಂದ ಕೆಳಕ್ಕೆ

1. ಅವರೆಲ್ಲರ ಪ್ರಕಾರ ಅವನು ಮಾಡಿದ್ದು ದ್ರೋಹವೇ ಆದೀತು 4
2. ಯಾವ ವನದಿಂದಲೂ ತಂದಿದ್ದಲ್ಲ; ಇದು ಬರೀ ಬೆಣ್ಣೆ ಅಷ್ಟೆ 4
3. ಉದ್ಯೋಗವನ್ನು ಹುಡುಕಿ ಪಡೆವ ಕ್ರಮ ಏನು? 3
5. ಹೋದ ಕೆಲಸ ಕೈ ಬಿಟ್ಟು ಇದೇನು ಜಗಳ? 3
6. ಆ ಕಲ್ಲಿನ ಮೈಮೇಲೆಲ್ಲ ಸುಂದರ ಕೆತ್ತನೆಗಳೇ ತುಂಬಿವೆ 4
8. ತಟ್ಟನೆ ಬಂದ ದುಷ್ಟನನ್ನು ಎದುರಿಸಲು ಬೇಕಾದದ್ದು ಎಂಥ ಧೈರ್ಯ? 4
10. ಕಾಣಿಕೆ ಸಲ್ಲಿಸಿ ಗಳಿಸುವ ಸಂತಸ ಅತ್ಯಲ್ಪ ಕಾಲದ್ದು 3
11. ಇಷ್ಟು ಸುಂದರ ಕುಲಾವಿಯನ್ನು ಹೊಲಿದವ ಲಲಿತ ವಿದ್ಯಾ ಪರಿಣತನೇ ಇರಬೇಕು 4
12. ಕಲಿಯಲು ಕಷ್ಟವಿಲ್ಲದೇನಿಲ್ಲ ; ಇದು ಮರದ ಕೆತ್ತನೆಯ ವಿದ್ಯೆ 4
13. ಭಾರೀ ಕದನಕ್ಕೆ ಕಾರಣನಾದವ ಒಬ್ಬ ಹಣವಂತ 3

---

### 03–08–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಭ್ಯುದಯ 3. ಪ್ರಹಾರ 4. ಜತನ 6. ಸುರಾಪಾನ 7. ಪರಧನ 8. ನಾರುಬೇರು 10. ತಡಸಲು 12. ತರಬೇತು 14. ಬಡಿವಾರ 16. ಹೆದ್ದಾರಿ 17. ವಾಚಾಳ 18. ದುರ್ವರ್ತನೆ

**ಮೇಲಿನಿಂದ ಕೆಳಕ್ಕೆ**

1. ಅರಸು 2. ಯಜನ 3. ಪ್ರಸಾಧನ 5. ನಜರು 7. ಪರಿಣತ 9. ರುಜುವಾತು 11. ಸಲಹೆ 13. ಬರಗಾಲ 14. ಬರಿದು 15. ರವಾನೆ

ಪ್ರಶ್ನಾಂಕಣ

# ಪ್ರಾಣಿ ಬೇಟೆ: ಎಷ್ಟು? ಏಕೆ?

ಭೂಮಿಯಲ್ಲಿ ನೈಸರ್ಗಿಕ ನೆಲೆಗಳಲ್ಲಿರುವ ಕಶೇರುಕ ಪ್ರಾಣಿಗಳು (ಎಂದರೆ ಬೆನ್ನೆಲುಬನ್ನು ಪಡೆದಿರುವ ಪ್ರಾಣಿಗಳು, ಹಾಗೆಂದರೆ ಮತ್ಸ್ಯ, ಉರಗ, ಉಭಯವಾಸಿ, ಹಕ್ಕಿ ಮತ್ತು ಸ್ತನಿ ವರ್ಗಗಳಿಗೆ ಸೇರಿರುವ ಪ್ರಾಣಿಗಳು ಚಿತ್ರ ನೋಡಿ) ಮನುಷ್ಯರ ನೇರ ಬೇಟೆ ಮತ್ತು ಕಳ್ಳ ಬೇಟೆಗಳಿಗೆ ಎಷ್ಟೆಷ್ಟು ಸಂಖ್ಯೆಗಳಲ್ಲಿ ಮತ್ತು ಏನೇನು ಉದ್ದೇಶಗಳಿಗೆ ಬಲಿಯಾಗುತ್ತಿವೆ ಎಂಬುದನ್ನು ಕುರಿತ ವೈಜ್ಞಾನಿಕ ಅಧ್ಯಯನವೊಂದು ಇತ್ತೀಚೆಗೆ ನಡೆಯಿತು. ಹಲವಾರು ಪ್ರತಿಷ್ಠಿತ ಪರಿಸರ ವಿಜ್ಞಾನಿಗಳು ಮತ್ತು ಜೀವ ವಿಜ್ಞಾನಿಗಳು ಒಟ್ಟಾಗಿ ಕೈಗೊಂಡ ಆ ಅಧ್ಯಯನದ ವಿಸ್ತಾರ ವರದಿ ಸುಪ್ರಸಿದ್ಧ ಆನ್‌ಲೈನ್ ವಿಜ್ಞಾನ ಪತ್ರಿಕೆ ಕಮ್ಯುನಿಕೇಷನ್ಸ್ ಬಯಾಲಜಿಯ ಇದೇ ಕಳೆದ ಜೂನ್ 29ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಆ ವರದಿಯಲ್ಲಿನ ಅತ್ಯಂತ ಮಹತ್ವದ ಮತ್ತು ಅಷ್ಟೇ ಕುತೂಹಲದ ಅಂಶಗಳು ಇಲ್ಲಿವೆ:

- ಧರೆಯಲ್ಲಿ ಈವರೆಗೆ ಗುರುತಿಸಲಾಗಿರುವ ಕಶೇರುಕ ಪ್ರಾಣಿ ಪ್ರಭೇದಗಳ (ಎಂದರೆ ಬೆನ್ನೆಲುಬು ಇರುವ ಪ್ರಾಣಿಗಳು) ಒಟ್ಟು ಸಂಖ್ಯೆ 69,963. ಆ ಪೈಕಿ ಅಧ್ಯಯನ ಮಾಡಲಾದ 47,000 ಪ್ರಭೇದಗಳಲ್ಲಿ 15,000 ಪ್ರಭೇದಗಳು ಮನುಷ್ಯರ ಬೇಟೆಗೆ ಗುರಿಯಾಗಿವೆ. ಮನುಷ್ಯರ ಪ್ರಾಣಿ ಬೇಟೆಯ ಉದ್ದೇಶಗಳು ಹಲವಾರು: ಆಹಾರ, ಮುದ್ದಿನ ಪ್ರಾಣಿ ಸಾಕಣೆ, ಉಣ್ಣೆ, ಕುಶಲ ಕೆತ್ತನೆಗಳಿಗೆ ಸಾಮಗ್ರಿ, ಮನರಂಜನಾ ಬೇಟೆ, ಇಂಧನ (ಕೊಬ್ಬು), ರಾಸಾಯನಿಕಗಳ ತಯಾರಿಕೆ, ವಿಷಗಳ ಸಂಗ್ರಹಣೆ, ಔಷಧ ಮೂಲಗಳು, ಜೈವಿಕ ಸಂಶೋಧನೆ ಇತ್ಯಾದಿ.
- ಮನುಷ್ಯರ ಪ್ರತಿ ವರ್ಷದ ಒಟ್ಟೂ ಬೇಟೆಯ ಶೇ. 40ರಷ್ಟು ಪ್ರಭೇದಗಳು ಸಾಗರಗಳಲ್ಲಿವೆ; ಶುದ್ಧ ಜಲದ ಪ್ರಭೇದಗಳು ಶೇ. 35; ಶೇ.25ರಷ್ಟು ಪ್ರಭೇದಗಳು ನೆಲಾವಾರದಲ್ಲಿವೆ. ಮನುಷ್ಯರ ಬೇಟೆಗೆ ಗುರಿಯಾಗಿರುವ ಅಷ್ಟೂ ಪ್ರಭೇದಗಳಲ್ಲಿ ಹಕ್ಕಿಗಳದೇ ಗರಿಷ್ಠ ಭಾಗ; ಶೇ. 46ರಷ್ಟು. ದ್ವಿತೀಯ ಸ್ಥಾನ ಮತ್ಸ್ಯಗಳದ್ದು; ಶೇ. 42 ಭಾಗ. ಮನುಷ್ಯರು ಬೇಟೆಯಾಡುತ್ತಿರುವ ಎಲ್ಲ ಕಶೇರುಕ ಪ್ರಭೇದಗಳ ಸಮೀಪ ಶೇ.50 ಭಾಗ ಆಹಾರಕ್ಕಾಗಿ ಬಳಕೆ ಆಗುತ್ತಿವೆ. ಉಳಿದ ಅರ್ಧ ಭಾಗದ ಬಹುಪಾಲು ಹಕ್ಕಿಗಳು, ಸರೀಸೃಪಗಳು ಮತ್ತು ಆಲಂಕಾರಿಕ ಮೀನುಗಳು ಮುದ್ದಿನ ಸಾಕು ಪ್ರಾಣಿ ದಂಧೆಗೆ (Pet Trade) ಹೋಗುತ್ತಿವೆ.
- ಇನ್ನೂ ಸ್ಪಷ್ಟವಾದ ಅಂಕಿ ಅಂಶಗಳು ಬೇಕೆಂದರೆ, ಮತ್ಸ್ಯಗಳ ಒಟ್ಟು 33,450 ಪ್ರಭೇದಗಳಲ್ಲಿ ಮನುಷ್ಯರ ಬೇಟೆಗೆ ಗುರಿಯಾಗಿರುವ ಒಟ್ಟು 6889 ಪ್ರಭೇದಗಳ ಪೈಕಿ 4633 ಪ್ರಭೇದಗಳು ಆಹಾರಕ್ಕಾಗಿಯೂ, 2256 ಪ್ರಭೇದಗಳು ಮುದ್ದಿನ ಪ್ರಾಣಿಗಳಾಗಿಯೂ (Pet Animal) ಬಳಕೆಯಲ್ಲಿವೆ. ಒಟ್ಟು 10,000 ಖಗ ಪ್ರಭೇದಗಳಲ್ಲಿ ಬೇಟೆಗೆ ಗುರಿಯಾಗಿರುವ 6084 ಪ್ರಭೇದಗಳ ಪೈಕಿ 1595 ಪ್ರಭೇದಗಳು ಆಹಾರಕ್ಕಾಗಿಯೂ, 4489 ಪ್ರಭೇದಗಳು ಪೆಟ್ ದಂಧೆಯಲ್ಲೂ ಸಿಲುಕಿವೆ. ಉಭಯವಾಸಿಗಳ ಒಟ್ಟು 8675 ಪ್ರಭೇದಗಳ ಪೈಕಿ 252 ಪ್ರಭೇದಗಳು ಹಾಗೂ ಸ್ತನಿ ವರ್ಗದ ಒಟ್ಟು 5500 ಪ್ರಭೇದಗಳ ಪೈಕಿ 1,100 ಪ್ರಭೇದಗಳು ಆಹಾರಕ್ಕಾಗಿ ಬಲಿಯಾಗುತ್ತಿವೆ. ಉರಗಗಳ 10,000 ಪ್ರಭೇದಗಳ ಪೈಕಿ 761 ಪ್ರಭೇದಗಳು ಪೆಟ್ ದಂಧೆಗೆ ಗುರಿಯಾಗಿವೆ!



■ ಎನ್. ವಾಸುದೇವ್